**ಕರ್ನಾಟಕ ವಿಧಾನ ಸಭೆ**
**ಶುಕ್ರವಾರ ದಿನಾಂಕ 23ನೇ ಜುಲೈ 2004ರಂದು**
**ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ**
**ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು**
**ಅಧ್ಯಕ್ಷರಾದ (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಅಲಂಕರಿಸಿದ್ದರು**

**ಪ್ರಶ್ನೋತ್ತರಗಳು**

**ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.**

**ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಪಾವತಿ ಮಾಡುವುದರ ಬಗ್ಗೆ.**

47(184) ಶ್ರೀ ಆರ್. ಅಶೋಕ್(ಉತ್ತರಹಳ್ಳಿ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವಾಗ ಸಬ್ಸಿಡಿ ಬಾಕಿ ಹಣವೆಷ್ಟು ;

ಆ) ಈ ಸಬ್ಸಿಡಿ ಹಣ ಬಾಕಿ ಎಂದಿನಿಂದ ನೀಡಬೇಕಾಗಿರುವುದು ಹಾಗೂ ಈವರೆಗೂ ನೀಡದಿರಲು ಕಾರಣವೇನು :

ಇ) ಸಬ್ಸಿಡಿ ಬಾಕಿ ಹಣವನ್ನು ಯಾವಾಗ ವಿತರಿಸಲಾಗುವುದು ;

ಈ) ಇದಕ್ಕಾಗಿ ಮೀಸಲಾಗಿರುವ ಮತ್ತು ಮಂಜೂರು ಮಾಡಿರುವ ಹಣವೆಷ್ಟು ;

ಉ) ಈ ಹಣವನ್ನು ಯಾವ ಮೂಲದಿಂದ ಸಂಗ್ರಹಿಸಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ ( ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ದಿನಾಂಕ : 31–3–2004ರವರೆಗೆ 19555 ಘಟಕಗಳಿಗೆ ರೂ. 429.43 ಕೋಟಿ ಸಹಾಯಧನ ನೀಡಬೇಕಾಗಿರುತ್ತದೆ.

ಆ) ಜನವರಿ 1999 ರಿಂದ ಸಹಾಯಧನ ಬಾಕಿಯನ್ನು ನೀಡಬೇಕಾಗಿರುತ್ತದೆ. ರಾಜ್ಯದ ಹಣಕಾಸು ಸಂಸ್ಥೆಯ ಮೂಲಕ ಸಂಪನ್ಮೂಲ ಕ್ರೋಢೀಕರಿಸುತ್ತಿದ್ದು ಈಗಾಗಲೇ ರೂ. 81.00 ಕೋಟಿಗಳಷ್ಟು ಹಣವನ್ನು ಕ್ರೋಢೀಕರಿಸಲಾಗಿದೆ. ಮಂಜೂರಾತಿ ಪಡೆದ ಘಟಕಗಳಿಗೆ ಜೇಷ್ಠತೆ ಆಧಾರದ ಮೇಲೆ ಸಹಾಯ ಧನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗುವುದು.

ಇ) ಆಗಲೇ ಕೆಎಸ್ಎಫ್ಸಿ ಮುಖಾಂತರ ಕ್ರೋಢೀಕರಿಸಲಾಗದ ರೂ 81.00 ಕೋಟಿಗಳನ್ನು ಸರ್ಕಾರವು ಸಣ್ಣ ಕೈಗಾರಿಕಾ ಘಟಕಗಳಿಗೆ ಬಿಡುಗಡೆಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಈ) 2004–05ನೇ ಸಾಲಿನ ಆಯವ್ಯಯದಲ್ಲಿ ಇನ್ನಷ್ಟು ಸಹಾಯಧನದ ವಿತರಣೆಗೆ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ರೂ 65.00 ಕೋಟಿಗಳನ್ನು ಎತ್ತುವಳಿ ಮಾಡಲು ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಅನುಮತಿ ನೀಡುವ ಪ್ರಸ್ತಾವನೆ ಇದೆ.

ಉ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಬಾಂಡ್ಗಳ ಮುಖಾಂತರ ಸಂಪನ್ಮೂಲ ಸಂಗ್ರಹಿಸಲಾಗುತ್ತಿದೆ. ಈಗಾಗಲೇ ರೂ 81.00 ಕೋಟಿಗಳನ್ನು ಸಂಗ್ರಹಿಸಲಾಗಿದೆ.

**ಶ್ರೀ ಆರ್. ಅಶೋಕ್ (ಉತ್ತರಹಳ್ಳಿ)** : 81 ಕೋಟಿ ರೂಪಾಯಿಗಳನ್ನು ಈಗಾಗಲೇ ಕ್ರೋಢೀಕರಿಸಿದ್ದೇವೆ ಮತ್ತು 65 ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್ನಲ್ಲಿ

ಕ್ರೋಢೀಕರಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಒಟ್ಟು ಸಬ್ಸಿಡಿ ಬಾಕಿ ಇರತಕ್ಕಂಥಾದ್ದು ಸುಮಾರು 450 ಕೋಟಿ ರೂಪಾಯಿಗಳು. ಇವರು ಕ್ರೋಢೀಕರಿಸುವುದನ್ನು ಬಿಟ್ಟರೆ ಅದರಲ್ಲಿ ಇನ್ನೂ 300 ಕೋಟಿ ರೂ ಬಾಕಿ ಇರುತ್ತದೆ. ಈ 300 ಕೋಟಿ ರೂಪಾಯಿಗಳನ್ನು ಯಾವಾಗ ಇವರು ಕೊಡಲು ಸಾಧ್ಯವಾಗುತ್ತದೆ ? ಕಳೆದ ಐದು ವರ್ಷಗಳಿಂದ ಸಣ್ಣ ಕೈಗಾರಿಕೆಗಳ ಸ್ಥಿತಿ ಹೇಗಿದೆ ಎಂದು ತಮಗೆಲ್ಲಾ ಗೊತ್ತಿದೆ. ನನಗೆ ಗೊತ್ತಿರುವ ಹಾಗೆ ಹಳ್ಳಿಯ ರೈತರುಗಳೇ, ಬೆಂಗಳೂರಿಗೆ ಬರತಕ್ಕಂಥವರು ಚನ್ನಪಟ್ಟಣ, ರಾಮನಗರ, ಕನಕಪುರ ಈ ಕಡೆಗಳಿಂದ ಬರತಕ್ಕಂಥವರು. ಮಳೆಬೆಳೆ ಬಂದರೆ ಮತ್ತೆ ಅಲ್ಲಿಗೆ ಹೋಗುತ್ತಾರೆ. ಮತ್ತೆ ಇಲ್ಲಿಗೆ ಬಂದು ಕೆಲಸ ಮಾಡುತ್ತಾರೆ. ಇವರೆಲ್ಲಾ ಎರಡು ಸಾವಿರ ರೂಪಾಯಿಗಳಿಗೆ ಕೆಲಸ ಮಾಡುವವರು. ಅಂದರೆ ಇದು ಸುಮಾರು 20 ಲಕ್ಷ ಕುಟುಂಬಗಳಿಗೆ ಸಂಬಂಧಪಟ್ಟಂಥ ವಿಚಾರ ಹೀಗಿರುವಾಗ ನೀವು 300 ಕೋಟಿ ರೂಪಾಯಿಗಳ ಬ್ಯಾಲೆನ್ಸ್ ನಿಲ್ಲಿಸಿಕೊಂಡರೆ ಅವರ ಪಾಡೇನು ? ಈಗಾಗಲೇ ಕೆ.ಎಸ್.ಎಫ್.ಸಿ. ಯೂ ಹಾಳಾಗಿದೆ. ಕೆ.ಎಸ್.ಎಫ್.ಸಿ. ಹಾಳಾಗಿರುವುದು ಇದರಿಂದಲೇ. ಸಬ್ಸಿಡಿ ಹಣ ಬರುತ್ತದೆ ಎಂದು ಕೆ.ಎಸ್.ಎಫ್.ಸಿ. ಯವರು ಕೈಗಾರಿಕೆಗಳವರಿಗೆ ಸಾಕಷ್ಟು ಲೋನ್ ಕೊಟ್ಟುಬಿಟ್ಟರು. ಆದರೆ ನೀವು ಸಬ್ಸಿಡಿಯನ್ನು ಕೊಡಲಿಲ್ಲ. ನಾವು ಈಗಾಗಲೇ 81 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿದ್ದೇವೆ ಎಂದು ಹೇಳಿದಿರಿ. ಅದನ್ನು ತಮ್ಮ ಸರ್ಕಾರವೇನು ಕೊಡಲಿಲ್ಲ. ಹಿಂದೆ, ಎಸ್.ಎಂ. ಕೃಷ್ಣಾರವರ ಸರ್ಕಾರವಿದ್ದಾಗ, ಅವರು 81 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿ ಕೊಡಿ ಎಂದು ಹೇಳಿದ್ದರು. ನೀವು ಈ ವರ್ಷದ ಬಜೆಟ್‌ನಲ್ಲಿ 65 ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಿ ಕೊಡುತ್ತೇವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಯೇನೆಂದರೆ, ಉಳಿದಂಥ 300 ಕೋಟಿ ರೂಪಾಯಿಗಳನ್ನು ತಾವು ಯಾವಾಗ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ತಾವು ತಿಳಿಸಬೇಕು. ಮತ್ತು ನನ್ನ ಇನ್ನೊಂದು ಪ್ರಶ್ನೆ ಎಂದರೆ ಈಗ ಒಟ್ಟು 150 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಆದರೆ ಅದಕ್ಕೆ ಬಹಳಷ್ಟು ಒತ್ತಡಗಳಿರುವುದರಿಂದ ಇಲ್ಲಿ ಅವ್ಯವಹಾರವಾಗಲು ಕಾರಣವಾಗುತ್ತದೆ. ನನಗೆ ಗೊತ್ತಿದ್ದ ಹಾಗೆ ಸುಮಾರು 10–20 ಪರ್ಸೆಂಟ್ ಕಮೀಷನ್ ಕೊಡದಿದ್ದರೆ ಸಬ್ಸಿಡಿ ಕೊಡುವುದಿಲ್ಲ ಎಂದು ಕೈಗಾರಿಕೆಗಳವರು, ನಾನು ನಿನ್ನೆ ಅವರ ಹತ್ತಿರ ಮಾತನಾಡಿದಾಗ ಹೇಳಿದ್ದಾರೆ. ಡಿ.ಐ.ಸಿ. (ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್) ಗಳು ಇದರ ದಂಧೆ ಮಾಡಲು ಅವಕಾಶ ಆಗುತ್ತದೆ. ಆದ್ದರಿಂದ ನನ್ನ ಸಲಹೆ ಎಂದರೆ, ಕಾಸಿಯಾ ಸಂಸ್ಥೆಯ ಸಹಯೋಗವನ್ನು ತೆಗೆದುಕೊಂಡು ಸಬ್ಸಿಡಿಯನ್ನು ಕೊಟ್ಟರೆ ಉಪಯೋಗವಾಗುತ್ತವೆ ಎನ್ನುವ ಸಲಹೆಯನ್ನು ನಾನು ಕೊಡುತ್ತೇನೆ. ತಾವು ಬಾಕಿ 300 ಕೋಟಿ ರೂಪಾಯಿಗಳಿಗೆ ಏನು ವ್ಯವಸ್ಥೆ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

**ಶ್ರೀ ಪಿ.ಜಿ.ಆರ್. ಸಿಂಧ್ಯ :** ಸನ್ಮಾನ್ಯ ಎಸ್.ಎಂ. ಕೃಷ್ಣಾರವರ ಬಜೆಟ್ಟಿನ ಕಂಟಿನ್ಯುಯೇಷನ್ನೇ ಈಗ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂಥ ಬಜೆಟ್. ಎಸ್.ಎಂ. ಕೃಷ್ಣಾರವರು ಫೆಬ್ರವರಿಯಲ್ಲಿ ಮಂಡಿಸಿದಂಥ ಬಜೆಟ್ 2004–05ಕ್ಕೆ. ಮಾನ್ಯ ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದು ಸಂದರ್ಭದಲ್ಲಿ 81 ಕೋಟಿ ರೂಪಾಯಿಗಳನ್ನು ಸಾಲ ಎತ್ತಿ ಸಬ್ಸಿಡಿಯನ್ನು ಕೊಡಲು ಕೆ.ಎಸ್.ಎಫ್.ಸಿ.ಗೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಆ ಬಜೆಟ್ ಇನ್ನೂ ಕಾರ್ಯಗತವಾಗಿಲ್ಲ. ಫೆಬ್ರವರಿಯಲ್ಲಿ ಮಂಡನೆಯಾದಂಥ ಆ ಬಜೆಟ್ಟಿಗೆ ಇನ್ನೂ 31ರವರೆಗೆ ವೋಟ್-ಆನ್-ಅಕೌಂಟ್ ತೆಗೆದುಕೊಂಡಿರತಕ್ಕಂಥಾದ್ದು. ಈಗ ಮೂರು ತಿಂಗಳಷ್ಟೇ ಆಗಿರತಕ್ಕಂಥಾದ್ದು. 2005 ಮಾರ್ಚ್‌ರವರೆಗೆ ಇದೇ ಬಜೆಟ್ ಕಂಟಿನ್ಯೂ ಆಗುತ್ತದೆ. ಅದು ಕಂಟಿನ್ಯೂಯಸ್ ಪ್ರೋಸಸ್. ಇದು ಮೊದಲನೆಯದು.

ತಮ್ಮ ಮಾಹಿತಿಗೋಸ್ಕರ ಇದನ್ನು ಹೇಳುತ್ತಿದ್ದೇನೆ. ಒಟ್ಟು 429 ಕೋಟಿ ರೂಪಾಯಿಗಳ ಸಹಾಯ ಧನವನ್ನು ನೀಡಬೇಕಾಗಿದೆ. ಈ 429 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಕೆ.ಎಸ್.ಎಫ್.ಸಿ. ಯವರು 81 ಕೋಟಿ ರೂಪಾಯಿಗಳನ್ನು ಇದನ್ನು ಕೊಡಲಿಕ್ಕಾಗಿ ಸಾಲ ಎತ್ತಿ ರೈಸ್ ಮಾಡಿದ್ದಾರೆ. ಆ 81 ಕೋಟಿ ರೂಪಾಯಿಗಳನ್ನು ಇನ್ನೂ ಕೊಟ್ಟಿಲ್ಲ. Nothing has been distributed so far. ಅದರ ಜೊತೆಗೆ ಈಗ 65 ಕೋಟಿ ರೂಪಾಯಿಗಳನ್ನು ರೈಸ್ ಮಾಡಲು ನಮ್ಮ ಮಾನ್ಯ ಸಿದ್ದರಾಮಯ್ಯನವರು ಇದೇ ಬಜೆಟ್‌ನಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದು ಒಟ್ಟು 146 ಕೋಟಿ ರೂಪಾಯಿ ಆಗುತ್ತದೆ. ಇನ್ನು 5-6 ತಿಂಗಳೊಳಗೆ ಈ ಸಬ್ಸಿಡಿಯನ್ನು ರಿಲೀಸ್ ಮಾಡುತ್ತೇವೆ. 146 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುತ್ತೇವೆ. 429 ಕೋಟಿ ರೂಪಾಯಿಗಳಲ್ಲಿ 146 ಕೋಟಿ ರೂಪಾಯಿಗಳು ಹೋದರೆ 250 ಕೋಟಿ ರೂ ಚಿಲ್ಲರೆ ರೂಪಾಯಿಗಳು ಉಳಿಯುತ್ತದೆ. ಮಾನ್ಯ ಅಶೋಕ್‌ರವರೇ, ನಿಮಗೇ ಗೊತ್ತಿದೆ. ಇದು ನಿಂತಿರುವುದು ಮಾರ್ಚ್ 1999ರಲ್ಲಿ. 1999ರಲ್ಲಿ ನಿಂತಿರತಕ್ಕಂಥಾದ್ದು, 2004ರ ಒಂದೇ ವರ್ಷದಲ್ಲಿ 400 ಕೋಟಿ ರೂಪಾಯನ್ನು ಕೊಡಿ ಎಂದು ಹೇಳಿದರೆ ಅದು ಯಾವುದೇ ಸ್ಟೇಟ್ ಎಕ್ಸ್‌ಚೆಕರ್‌ಗೆ ಬರ್ಡನ್ ಆಗುತ್ತದೆ ಎನ್ನುವುದು ತಮಗೆ ಗೊತ್ತಿರತಕ್ಕಂಥ ವಿಚಾರ. You are a great supporter of small scale and manufacturing sector industries. ನಿಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ನೀವು ಅವರಿಗೆಲ್ಲಾ ಬಹಳ ಒಳ್ಳೆಯ ಕೆಲಸ ಮಾಡಿಸಿದ್ದೀರಿ. ನನಗೆ ಆ ವಿಚಾರಗಳು ಗೊತ್ತಿದೆ. ಆದ್ದರಿಂದ ತಾವು ಇದನ್ನು ಅಪ್ರೀಷಿಯೇಟ್ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. we are releasing Rs. 146 crores in the next 2-3 months. ಉಳಿದಿರತಕ್ಕಂಥ 250 ಕೋಟಿ ಚಿಲ್ಲರೆ ಅಥವಾ 280 ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ನಾನು, ಆದಷ್ಟು ಬೇಗ ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತೇನೆ. ಆದರೆ ಈ ಫೈನ್ಯಾಷಿಯಲ್ ಈಯರ್‌ನಲ್ಲೇ ಆಗುತ್ತದೆ ಎನ್ನುವ ಭರವಸೆ ನನಗಿಲ್ಲ. ಕೇಂದ್ರ ಸರ್ಕಾರಕ್ಕೆ ಸ್ವಲ್ಪ ಸಹಾಯಧನ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ನಾಳೆ ಕೇಂದ್ರ ಸರ್ಕಾರದ ಸಣ್ಣ ಕೈಗಾರಿಕಾ ಸಚಿವರು ಬರುತ್ತಿದ್ದಾರೆ, ಅವರನ್ನು ಅಧಿಕಾರಿಗಳು ಮತ್ತು ನಾವು ಭೇಟಿ ಮಾಡುತ್ತಿದ್ದೇವೆ. ಭೇಟಿ ಮಾಡಿ, ಸಲ್ಪ ಸಹಾಯ ಮಾಡಿ ಎಂದು ಕೇಳುತ್ತಿದ್ದೇವೆ. ಅವರೇನಾದರೂ ನಮಗೆ ಸಹಾಯ ಮಾಡಿದರೆ ಖಂಡಿತವಾಗಿಯೂ ಆದಷ್ಟು ಬೇಗ Other than this Rs. 146 crores, in this financial year ಬಿಡುಗಡೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇನೆ. ಮೂರನೆಯದಾಗಿ ಕೆ.ಎಸ್.ಎಫ್.ಸಿ. ಹಾಳಾಗಿದೆಯೆಂದರೆ, ಕೆ.ಎಸ್.ಎಫ್.ಸಿ. ಕಷ್ಟದಲ್ಲಿದೆ, ಅದಕ್ಕೂ ಸ್ವಲ್ಪ ಆಕ್ಸಿಜನ್ ಸಿಗಲಿ ಎಂದು, ಕೆ.ಎಸ್.ಎಫ್.ಸಿ ಯವರೇ ಈ ಎಸ್.ಎಸ್.ಐ. ಮ್ಯಾನುಫ್ಯಾಕ್ಚರಿಂಗ್ ಯೂನಿಟ್ಸ್‌ಗೆ ಸಾಲವನ್ನು ಕೊಟ್ಟಿರತಕ್ಕದ್ದು ಕೆ.ಎಸ್.ಎಫ್.ಸಿ ಯವರಿಗೂ ಸ್ವಲ್ಪ ಜೀವ ಬರಲಿ ಎಂದು ಅವರಿಗೆ ರೈಸ್ ಮಾಡಲು ಹೇಳಿದ್ದೇವೆ, ಈ 65 ಕೋಟಿ ರೂಪಾಯಿಯನ್ನು ಕೆ.ಎಸ್.ಎಫ್.ಸಿ ಯವರಿಗೆ ಅವಕಾಶ ಮಾಡಿಕೊಡುತ್ತೇವೆ. so that they will get back their money. ಅವರೇನು ಸಾಲವನ್ನು ಕೊಟ್ಟಿದ್ದಾರೆ 165 ಕೋಟಿ ರೂ. ನಾವು ಮೊದಲು ಏನು ಮಾಡಿದ್ದೇವೆಂದರೆ ಒಂದು ಗೈಡ್ ಲೈನನ್ನು ಹಾಕಿದ್ದೇವೆ. ಅದು ಈಗಾಗಲೆ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಗಿದೆ. ಇದು ಏನಿರಬೇಕು. ಯಾರ್ಯಾರಿಗೆ ಕೊಡಬೇಕೆಂದು ಎಂಬುದು ಆ ಗೈಡ್ ಲೈನ್ಸ್‌ನಲ್ಲಿದೆ. ಅದರಲ್ಲಿ ಮೊದಲ ವಿಚಾರವೆಂದರೆ ಕೆ.ಎಸ್.ಎಫ್.ಸಿ. ಯವರೇನಾ ಸಾಲವನ್ನು ಹೊಂದಿದ್ದಾರೆ ಅದನ್ನು ಪೂರ್ತಿ ಮಾಡಲು ಅವರಿಗೇ

ಮೊದಲ ಆದ್ಯತೆಯನ್ನು ಕೊಡಬೇಕು ಸಬ್ಸಿಡಿಯನ್ನು ಬಿಡುಗಡೆ ಮಾಡುವಾಗ ಎನ್ನತಕ್ಕದನ್ನು ಹೇಳಿದ್ದೇವೆ. ಮೊದಲು ಕೆ.ಎಸ್.ಎಫ್.ಸಿ. ಯವರದ್ದು ಅದಾದಮೇಲೆ Nationalized Banks ನವರು ಏನು ಸಾಲವನ್ನು ಕೊಟ್ಟಿದ್ದಾರೆ ಅವರಿಗೆ next priority ಕೊಡಬೇಕೆಂದು ಇದ್ದೇವೆ. ಇದು ಎರಡನೆಯದು ಮೂರನೆಯದಾಗಿ, ಮಾನ್ಯ ಅಶೋಕ್‌ರವರೆ ಇನ್ನೂ ದುಡ್ಡೇ ರಿಲೀಸ್ ಮಾಡಿಲ್ಲ. ತಾವೇ ಸ್ವಲ್ಪ ಯೋಚನೆ ಮಾಡಿ, you are a very senior legislator. If I am right, you are elected for the third time. 10 ಪರ್‌ಸೆಂಟ್, 20 ಪರ್‌ಸೆಂಟ್ ಅವ್ಯವಹಾರವನ್ನು ಡಿ.ಐ.ಸಿ. ಯವರೆಲ್ಲಾ ಆಗಲೇ ಪ್ರಾರಂಭ ಮಾಡಿದ್ದಾರೆಂದರೆ ಹೇಗೆ ?ಇನ್ನೂ ಹಣವೇ ಬಿಡುಗಡೆಯಾಗಿಲ್ಲ ಇನ್ನೂ ಕೆ.ಎಸ್.ಎಫ್.ಸಿ. ಯವರೇ ಮೂರು ತಿಂಗಳಿನಿಂದ ಆ 81 ಕೋಟಿ ರೂ ಯನ್ನು ಇಟ್ಟುಕೊಂಡಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮೊದಲೇ ವ್ಯಾಪಾರಗಳು ಪ್ರಾರಂಭವಾಗುತ್ತವೆ ಎಂದು ತಮ್ಮ ಗಮನಕ್ಕೆ ತಂದೆ, ಈ ವಿಚಾರ ತಮಗೆ ಗೊತ್ತಿರುವಂಥದ್ದು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಸುಮ್ಮನೆ ಕುಳಿತುಕೊಳ್ಳಿ. ಎಲ್ಲೋ 'ದಾರಿಯಲ್ಲಿ ಮಾತನಾಡಿಕೊಳ್ಳುತ್ತಾರೆ ಎಂದು ಹೇಳಿ. ಅದನ್ನು ತಪ್ಪು ಎಂದು ನಾನು ಹೇಳುವುದಿಲ್ಲ. ಯಾರೋ ಬ್ರೋಕರ್ಸ್ ಮಾತನಾಡಿಕೊಳ್ಳುತ್ತಾರೆಂದು ಹೇಳಿ. ಅದು ಇರಬಹುದು. ನಾನು ಅದನ್ನು ಇಲ್ಲವೆಂದು ಅಲ್ಲಗಳೆಯುವುದಿಲ್ಲ. ಇದೆಲ್ಲಾ ಸಾಮಾನ್ಯವಾದ ವಿಚಾರ ಎನ್ನತಕ್ಕದ್ದೂ ಸಹ ತಮಗೆ ಗೊತ್ತಿದೆ. ಆದ್ದರಿಂದ ಖಂಡಿತವಾಗಿ ನೀವೇನು ನಮಗೆ ಸಲಹೆಯನ್ನು ಕೊಟ್ಟಿದ್ದೀರಿ it will be very very transparent. ನಾನು ಒಂದು ಸಲ ಗೈಡ್ ಲೈನ್ಸ್‌ನ್ನು ಫಿಕ್ಸ್ ಮಾಡಿದ ಮೇಲೆ ಆ ಗೈಡ್ ಲೈನ್ಸ್‌ನ್ನು ಅಸೆಂಬ್ಲಿಯಲ್ಲೂ ಇಡುತ್ತೇನೆ. ರಿಲೀಜಸ್ ಸಹ ಅಸೆಂಬ್ಲಿಯಲ್ಲಿ ಇಡುತ್ತೇನೆ. ಪ್ರತಿಯೊಂದು ಡಿ.ಐ.ಸಿ. ಆಫೀಸಿನಲ್ಲೂ ಈ [illegible]ಯಾರಿಟಿ ಮೇಲೆ [illegible] ಎನ್ನತಕ್ಕದ್ದು ಹೇಳಿದ್ದೇನೆ. ಇದನ್ನು ತಕ್ಷಣ ಬಿಡುಗಡೆ ಮಾಡಿ ಎಂದು ಅನೇಕ ಶಾಸಕರುಗಳು [illegible] ಪತ್ರವನ್ನು ಕೊಟ್ಟಿದ್ದಾರೆ. ಪ್ರಿಯಾರಿಟಿಯ ಒಳಗಡೆ ಶಾಸಕರಿಗೂ ನಾನು ಸಮಾಧಾನಕರವಾಗಿ ಹೇಳಿದ್ದೇನೆ. ನೋಡಿ ನಾವು ಒಂದು ಗೈಡ್‌ಲೈನ್ಸ್‌ನಲ್ಲಿ ಹಾಕುತ್ತೇವೆ. ಅದರ ಪ್ರಕಾರವೇ ಮಾಡುತ್ತೇವೆ. ಅದರ ಮೇಲೂ ನಿಮ್ಮ ಗಮನಕ್ಕೆ ಬಂತು ಎಂದು ಇಟ್ಟುಕೊಳ್ಳಿ. ಇಲ್ಲಿ ನಮ್ಮ ಅಧಿಕಾರಿಗಳೆಲ್ಲಾ ಬಂದಿದ್ದಾರೆ. ಅವರು ಇದನ್ನು ಕಿವಿಯ ಮೇಲೆ ಹಾಕಿಕೊಂಡಿದ್ದಾರೆ. ನಿಮ್ಮ ಗಮನಕ್ಕೆ ಬಂದರೆ ಹೇಳಿ, ನಾನು immediate ಆಗಿ ಸಂಬಂಧಪಟ್ಟ ಆಫೀಸರ್ಸ್ ಮೇಲೆ I will take strict action and I promise you that the while thing with be 100% foolproof transparent method.

**ಶ್ರೀ ಆರ್. ಅಶೋಕ್** : ಟ್ರಾನ್ಸ್‌ಫರೆಂಟ್ ಆಗಿ ಮಾಡುತ್ತೇನೆಂದು ಮಾನ್ಯ ಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದಾರೆ. ಬಹಳ ಸಂತೋಷ ಆ ಕಳೆಕಳಿ ಮಾನ್ಯ ಸಿಂಧ್ಯಾರವರಿಗೆ ಇದೆಯೆಂದು ನಾನು ಅಂದುಕೊಂಡಿದ್ದೇನೆ. ನಾನು ನಿನ್ನೆ ಸಣ್ಣ ಕೈಗಾರಿಕೆಗಳ ಅಸೋಸಿಯೇಷನ್‌ರವರನ್ನೇ ಭೇಟಿ ಮಾಡಿದ್ದೆ ಅವರು ಅವರ ಅಳಲನ್ನು ಒಂದು ಗಂಟೆ ಹೇಳಿದರು. ನೀವು ಏನೇ ಮಾಡಿದರೂ ಅವರು ನಮ್ಮಿಂದ ಲಂಚವನ್ನು ತೆಗೆದುಕೊಳ್ಳದೆ ಬಿಡುವುದಿಲ್ಲ ಎಂದು ಹೇಳಿದರು. ಇಷ್ಟೂ ಹಣವನ್ನು ಬಿಡುಗಡೆ ಮಾಡಿದ್ದರೆ ಆ ರೀತಿ ರಶ್ ಆಗುತ್ತಿರಲಿಲ್ಲ. ಸ್ವಲ್ಪ ಹಣ ಕೊಡುವುದರಿಂದ ಬಹಳಷ್ಟು ಜನ ಪ್ರಭಾವ ಬೀರುವುದು ಇದೆಲ್ಲಾ ಆಗುತ್ತದೆ. ಆದ್ದರಿಂದ ಏನಾದರೂ ಬೇರೆ ಮಾಡಿ, ನಾನು ಈಗಾಗಲೇ ಖಾಸಗಿಯವರ ಸಂಯೋಗವನ್ನು ತೆಗೆದುಕೊಂಡು ಮಾಡಿ ಎಂದು ಸಲಹೆ ಕೊಟ್ಟೆ. ಆ ರೀತಿ ಒಳ್ಳೆಯದು ಎಂದು ನನ್ನ ಸಲಹೆ. ತಾವು ಅದನ್ನು ಮಾಡಬೇಕು. ತಾವು ಹಿಂದಿನ ಎಸ್.ಎಂ. ಕೃಷ್ಣರವರ ಸರ್ಕಾರವೇನು ಮಾಡಿಲ್ಲವೆಂದು.,,,,,,,

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಹಿಂದಿನ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಮಾಡಿದ್ದು ಎಂದು ನಾನು ಹೇಳಿದ್ದು

**ಶ್ರೀ ಆರ್. ಅಶೋಕ್ :** ಈ ವರ್ಷದ ಬಜೆಟ್‌ನಲ್ಲಿ ಅದನ್ನು ಪ್ರಾವಿಜನ್ ಮಾಡಿದ್ದಾರೆ ಎಂದು ಹೇಳಿದಿರಿ. ಅವರು ಮಾಡಿರುವುದು 81 ಕೋಟಿ ರೂಪಾಯಿಗಳು. ತಾವು ಕೊಡುತ್ತಿರುವುದು 65 ಕೋಟಿ ರೂಪಾಯಿಗಳು. ಜನತಾದಳದ ಸರ್ಕಾರ ಬಂದಮೇಲೆ ಕೊಟ್ಟಿರುವುದು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಜನತಾದಳ ಸರ್ಕಾರವಲ್ಲ, ಸಮ್ಮಿಶ್ರ ಸರ್ಕಾರ.

**ಶ್ರೀ ಆರ್. ಅಶೋಕ್ :** ಅಲ್ಲಿ ಇರುವುದೆಲ್ಲಾ ನೀವೇ, ತಾವು ಬಂದಮೇಲೆ ಎಸ್.ಎಂ. ಕೃಷ್ಣರವರು ಮಾಡಿದ್ದಕ್ಕಿಂತ ಹೆಚ್ಚು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಪಾಪ 20 ಲಕ್ಷ ಕುಟುಂಬ, ಎಲ್ಲಾ ರೈತಾಪಿ ಕುಟುಂಬದಿಂದ ಬಂದು ಎರಡು ಮೂರು ಸಾವಿರ ರೂಪಾಯಿಗೆ ಕೆಲಸ ಮಾಡಿ ಜೀವನ ನಡೆಸುವಂಥವರಿಗೆ. ನಿಮಗೆ ಸಮಾಧಾನವಾಗುತ್ತಿತ್ತು, ಜನತಾದಳ ಸರ್ಕಾರ ಬಂದು ಬದಲಾವಣೆಯಾಯಿತು. ನಮಗೇನೋ ಒಂದು ಪರಿಹಾರವನ್ನು ಕೊಟ್ಟರು ಅದರಿಂದ ಅವರಿಗೇನೊ ಉಪಯೋಗವಾಗುತ್ತಿತ್ತು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ, ಹಿಂದಿನ ಸರ್ಕಾರದ ಕರ್ಮವನ್ನು ನೀವು ಒಪ್ಪಿಕೊಳ್ಳಲು ಹೋಗಬೇಡಿ. ಏಕೆಂದರೆ 500 ಎಕರೆ ಜಮೀನನ್ನು ಬಿ.ಡಿ.ಎ. ನಿಂದ ಬಿಟ್ಟುಬಿಟ್ಟಿದ್ದಾರೆ. ಆದ್ದರಿಂದ ನೀವು ಒಪ್ಪಿಕೊಳ್ಳಲು ಆಗುತ್ತದೆಯೇ ? ಅದನ್ನು ನಿಮ್ಮ ಅಕೌಂಟ್‌ಗೆ ಸೇರಿಸಿಕೊಳ್ಳಬೇಡಿ. ನಿಮ್ಮದೇ ಸಪರೇಟ್ ಅಕೌಂಟ್ ಆಗಬೇಕು. ಹೊಸ ಸರ್ಕಾರ. ಅದಕ್ಕೆ ನಾನು ತಮ್ಮನ್ನು ಆಗ್ರಹ ಮಾಡುತ್ತಿದ್ದೇನೆ. ಬೇರೆ ಏನಾದರೂ ವ್ಯವಸ್ಥೆ ಮಾಡಿ ಆ 300 ಕೋಟಿ ರೂಪಾಯಿ ಸುಮಾರು 283 ಕೋಟಿ ರೂ ಬಾಕಿ ಇದೆ. ಅದನ್ನು ತೀರಿಸಲು ಏನಾದರೂ ವ್ಯವಸ್ಥೆ ಮಾಡಿದರೆ ಈ ಬಡ ಕುಟುಂಬಗಳಿಗೆ ಸಹಾಯವಾಗುತ್ತದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** 429 ಕೋಟಿ ರೂಪಾಯಿ ಬಾಕಿ ಎಂದು ಹೇಳಿದ್ದೇನೆ. ಅದು ಎಸ್. ಎಂ. ಕೃಷ್ಣರವರ ಸರ್ಕಾರದ ಕಂಟಿನ್ಯುಯೇಷನ್ನೇ ಈ ಬಜೆಟ್ ಎನ್ನತಕ್ಕದನ್ನೂ ಸಹ ಹೇಳಿದ್ದೇನೆ. I have appreciated the forever Chiefminister S.M. Krishna for having included that in the budget. ಎಂದು ಹೇಳಿದ್ದೇನೆ. ಅದೇ ಬಜೆಟ್‌ನಲ್ಲಿ ಇನ್ನೂ 60 ಕೋಟಿ ರೂ ಯನ್ನು ಸೇರಿಸಿದ್ದೇವೆಂದು ಹೇಳಿದ್ದೇನೆ. 140 ಕೋಟಿ ರೂ ರಿಲೀಸ್ ಮಾಡುತ್ತಿದ್ದೇವೆ ಎಂಬ ಮಾತನ್ನು ಸಹ ಹೇಳಿದ್ದೇನೆ. KASSIA is a private organization Definitely cassia is a very good organization ಎಲ್ಲಾ ಇಂಟರ್ ಆಕ್ಷನ್ ಕರೆದಿದ್ದೇನೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳಲ್ಲಿ ಇದೂ ಸಹ ಒಂದು, ನಾನು ಟ್ರಾನ್ಸ್ ಫರೆಂಟ್ ಆಗಿ ಇರುತ್ತದೆ ಎಂದು ಹೇಳಿದಾಗ not only KASSIA but all members of this august House and also the Council Members and any Public can see hundred per cent transparency in this. ನಾನು ಯಾರ ಮಾತನ್ನು ಕೇಳುವುದಿಲ್ಲ. ಕಾನೂನು ಇರುತ್ತದೆ. ರೂಲ್ಸ್‌ನ್ನು ಫ್ರೇಮ್ ಮಾಡುತ್ತೇನೆ. ರೂಲ್ಸ್ ಪ್ರಕಾರ ಸಪೋಸ್ ಈ ಚೆಕ್‌ನ್ನು ಕೊಟ್ಟು ದುಡ್ಡನ್ನು ತೆಗೆದುಕೊಳ್ಳಬಹುದು, ಅದಕ್ಕೋಸ್ಕರವೇ ಬಹಳ ಗಟ್ಟಿ ಧ್ವನಿಯಿಂದ ಈ ವೇದಿಕೆಯನ್ನು ಉಪಯೋಗಿಸಿಕೊಂಡು ನಾನು ಹೇಳುತ್ತಿದ್ದೇನೆ. ಆ ರೀತಿ ಯಾರಾದರು ಬರಿ ಶಾಸಕರ ಗಮನಕ್ಕೆ ಅಷ್ಟೇ ಅಲ್ಲ ಯಾರ ಗಮನಕ್ಕೆ ಬಂದರೂ ತಕ್ಷಣ ನಮಗೆ ತಿಳಿಸಿದರೆ ನಮ್ಮ ಅಧಿಕಾರಿಗಳ ಮೇಲೆ ನನಗೆ ವಿಶ್ವಾಸವಿದೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆ, ನಾನೂ ಕ್ರಮ ತೆಗೆದುಕೊಳ್ಳುತ್ತೇನೆ.

**ಅಧ್ಯಕ್ಷರು** : ಮುಂದಿನ ಪ್ರಶ್ನೆ ಹೊನ್ನಾಳಿ ಜಬ್ಬಾರ್ ಖಾನ್‌ರವರು.

**ಶ್ರೀ ಏ. ನಾರಾಯಣಸ್ವಾಮಿ** : ಒಂದೇ ಒಂದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಸಣ್ಣ ಕೈಗಾರಿಕೆಗಳ ಮಾಲೀಕರ ಸಾವು ಉಳಿವಿನ ಪ್ರಶ್ನೆ ಇದು.

**ಅಧ್ಯಕ್ಷರು** : ಬಹಳ ವಿವರವಾಗಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ 13 ಪ್ರಶ್ನೆಗಳಾಗಬೇಕು. ಇದೇ ರೀತಿಯಾದರೆ ನಡೆಸಲು ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬರು ಅವರವರ ಪ್ರಶ್ನೆಗಳನ್ನು ಇಡುತ್ತಾ ಹೋದರೆ ಈ ಸದನವನ್ನು ನಡೆಸುವುದು ಹೇಗೆ ? ವಿವರವಾಗಿ ಎಲ್ಲಾ ವಿಚಾರಗಳಲ್ಲಿ ಉಪಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್** : ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಕೆಲವು ಸಲಹೆ ಸೂಚನೆಗಳನ್ನು ಕೊಡುತ್ತಿದ್ದೇವೆ.

**ಅಧ್ಯಕ್ಷರು** : ಸಲಹೆ ಸೂಚನೆಗಳನ್ನು ಕೊಡಲು ಬಜೆಟ್ ಮೇಲೆ ಚರ್ಚೆ ಮಾಡುವಾಗ ಅವಕಾಶ ಇದೆ. ಯಾರಿಗಾದರೂ ಒಬ್ಬರಿಗೆ ಅವಕಾಶ ಕೊಡುತ್ತೇನೆ. ದಯಮಾಡಿ ಸಹಕರಿಸಬೇಕು. ಈ ರೀತಿಯಾದರೆ ಆಗುವುದಿಲ್ಲ. ನಿಮಗೆಲ್ಲರಿಗೂ ನಿಮ್ಮದೆ ಆದ ಪ್ರಶ್ನೆಗಳನ್ನು ಹಾಕಲು ಅವಕಾಶ ಇಲ್ಲ, ಹಾಗಾದರೆ ಇಲ್ಲಿ ನಡೆಸಲು ಆಗುವುದಿಲ್ಲ.

**ಶ್ರೀ ಏ. ನಾರಾಯಣಸ್ವಾಮಿ** : ಮಾನ್ಯ ಮಂತ್ರಿಗಳು ಬಹಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ದೊಡ್ಡ ಸಮಸ್ಯೆ ಎಂದರೆ, ಹಿಂದಿನ ಸರ್ಕಾರದ ಬಜೆಟ್‌ನಲ್ಲಿ 81 ಕೋಡಿ ರೂ, ಈ ಬಜೆಟ್‌ನಲ್ಲಿ 65 ಕೋಟಿಯನ್ನು ರೂ ರಿಲೀಸ್ ಮಾಡುತ್ತೇವೆಂದು ಹೇಳಿದ್ದೀರಿ ಆದರೆ ಬೃಹತ್ ಕೈಗಾರಿಕೆಗಳಿಗೆ ಹೆಚ್ಚು ಸಬ್ಸಿಡಿ ಹೋದಾಗ ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಬಹಳಷ್ಟು ಸಮಸ್ಯೆಗಳನ್ನು ಅನುಭವಿಸುತ್ತಾ ಇವೆ. ಅದರಲ್ಲೂ ನೇಕಾರಿಕೆ ಉದ್ದಿಮೆ, ನೂರಕ್ಕೆ ತೊಂಬತ್ತು ಪರ್‌ಸೆಂಟ್ ಮುಚ್ಚಲು ಹೊರಟಿದೆ, ನಾಲ್ಕು ಐದು ವಿದ್ಯುತ್ ಮಗ್ಗಗಳನ್ನು ಹಾಕಿಕೊಂಡಿರುವ ನೇಕಾರರು ಮುಚ್ಚಿಬಿಟ್ಟಿದ್ದಾರೆ. ಬಹುಶಃ ಆತ್ಮಹತ್ಯೆ ಮಾಡಿಕೊಳ್ಳುವ ಸ್ಟೇಜ್‌ನಲ್ಲಿ ಅವರಿದ್ದಾರೆ. ಆದ್ದರಿಂದ ಇದರಲ್ಲಿ ಇಷ್ಟು ಪರ್ಸೆಂಟೇಜನ್ನು ಸಣ್ಣ ಮತ್ತು ಗುಡಿ ಕೈಗಾರಿಕೆಗೆ ನೀಡುವುದಕ್ಕೆ ತೀರ್ಮಾನ ಮಾಡಿದರೆ ಬಹಳ ಉಚಿತ, ದಯವಿಟ್ಟು ಆ ಬಗ್ಗೆ ಪ್ರಕಟಣೆ ಮಾಡಬೇಕು, ಅದರ ಜೊತೆಗೆ ಕೆ.ಎಸ್.ಎಫ್.ಸಿ. ಯನ್ನು ಮುಚ್ಚಬೇಕೆಂಬ ಯೋಚನೆ ನಡೆಯುತ್ತಿದೆಯೆಂದು ಹೇಳುತ್ತಿದ್ದಾರೆ. ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂಬ ಬಗ್ಗೆ ಹೇಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಸರ್ಕಾರದ ಮುಂದೆ ಕೆ.ಎಸ್.ಎಫ್.ಸಿ, ಯನ್ನು ಮುಚ್ಚಬೇಕು ಎಂಬ ಪ್ರಾರ್ಥನೆ ಇಲ್ಲ. ಮಾನ್ಯ ನಾರಾಯಣಸ್ವಾಮಿಯವರಿಗೆ ಭರವಸೆ ಕೊಡುತ್ತಿದ್ದೇನೆ. ನಾವು ಕೊಡತಕ್ಕಂಥ ಸಬ್ಸಿಡಿ ಏನಿದೆ it is 100% only to the small and tiny industries, not large and medium industries. The 2001-2006 Industrial Policy which has been accepted by this House unanimously, there is no subsidy to large and medium scale industries.

**ಶ್ರೀ ಡಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನೂ ಈ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಅದು ಸ್ಟಾರ್ಡ್ ಆಗಿ ಬರಲಿಲ್ಲ, ಸಬ್ಸಿಡಿ ಹಣ ಉಳಿಸುವುದು ತಪ್ಪು ಎಂದು ತಮಗೆ ಮನವರಿಕೆಯಾಗಿದೆ. ತಾವು ಈ ವರ್ಷ ಪ್ರಾರಂಭವಾದಂಥ ಉದ್ದಿಮೆಗಳಿಗೆ ಸಬ್ಸಿಡಿಯನ್ನು

ನಿಲ್ಲಿಸುವುದಿಲ್ಲ ಎಂಬ ವ್ಯವಸ್ಥೆ ಮಾಡುತ್ತೀರಾ ? ಬ್ಯಾಕ್‌ಲಾಗ್ ಕ್ಲಿಯರ್ ಮಾಡುವುದು ಬೇರೆ, ಈಗ ಹೊಸದಾಗಿ ಪ್ರಾರಂಭ ಮಾಡುವಂಥ ಸಂಸ್ಥೆಗಳಿಗೆ; ಬಾಕಿ ಉಳಿಸುವುದು ತಪ್ಪು ಎಂದ ಮೇಲೆ ಅದನ್ನು ಸರಿಮಾಡಬೇಕಲ್ಲವೆ ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : 2001–2006 ರ Industrial policy ಯಲ್ಲಿ ನಾವು ಏನೇನು ಇಟ್ಟುಕೊಂಡಿದ್ದೇವೆ ಅದನ್ನೆಲ್ಲಾ ಮಾನ್ಯ ಡಿ.ಆರ್. ಪಾಟೀಲರು ಗೌರವಾನ್ವಿತ ಸದಸ್ಯರಾಗಿದ್ದರು. ಅವರು ಅದನ್ನು in detail ಓದಿದ್ದಾರೆ. ಆ ಪಾಲಿಸಿ ಪ್ರಕಾರವಾಗಿ ಯಾವ್ಯಾವ ಇಂಡಸ್ಟ್ರೀಸ್‌ಗೆ ಎಷ್ಟೆಷ್ಟು ಇನ್‌ಸೆಂಟೀವ್ಸ್ ಅನ್ನು ಕೊಡಬೇಕೆಂದು specify ಮಾಡಿದ್ದೇವೆ. ಅದರ ಪ್ರಕಾರವಾಗಿ follow on ಮಾಡುತ್ತೇವೆ. But one thing my prioriy as Industries Minister is, I am very very clear. ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ಮತ್ತು ಮಧ್ಯಮ ಕೈಗಾರಿಕೆಗಳಿಗೆ ನಾನು ಹೆಚ್ಚಿನ ಮಹತ್ವವನ್ನು, ಅಂದರೆ manufacturing sector ಮತ್ತು job oriented, ಯಾವುದು ಹೆಚ್ಚಿಗೆ ಕೆಲಸ ಕೊಡಬಲ್ಲದು ಅಂಥ ಕೈಗಾರಿಕೆಗಳಿಗೆ ಸರ್ಕಾರ ನಮ್ಮ ಅವಧಿಯಲ್ಲಿ ಸಂಪೂರ್ಣವಾದ ಸಹಕಾರ ಮತ್ತು ಪ್ರೋತ್ಸಾಹವನ್ನು ಕೊಡುತ್ತೇವೆ.

**ಶ್ರೀ ಸಿ.ಎಂ. ಉದಾಸಿ** : ಮಾನ್ಯ ಅಧ್ಯಕ್ಷರೆ, ಮಾನ್ಯರು ಹೇಳುವುದೇನೆಂದರೆ, ಹಿಂದಿನ ಮುಖ್ಯಮಂತ್ರಿಗಳು ಇದಕ್ಕೆ 81 ಕೋಟಿ ರೂಪಾಯಿಗಳನ್ನು ಪ್ರಸ್ತಾಪಿಸಿದ್ದರು. ಅದನ್ನು ಕ್ರೋಢೀಕರಿಸಬೇಕಾದರೆ ಸಾಲ ಎತ್ತುವಳಿ ಮಾಡುತ್ತೀರೆಂದು ಅರ್ಥವೆಂದು ನಾನು ಭಾವಿಸುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಸಾಲ ಎತ್ತುವಳಿಯಾಗಿದೆ.

**ಶ್ರೀ ಸಿ.ಎಂ. ಉದಾಸಿ** : ಇವತ್ತು 65 ಕೋಟಿ ರೂಪಾಯಿಗಳನ್ನು ಎತ್ತುವಳಿ ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. 81 ಕೋಟಿ ರೂ ಮತ್ತು 65 ಕೋಟಿ ರೂಪಾಯಿಗಳಿಗೆ ಏಕೆ ಸೀಮಿತ ಮಾಡಬೇಕೆಂಬುದೇ ನನ್ನ ಪ್ರಶ್ನೆ. 429 ಕೋಟಿ ರೂಪಾಯಿಗಳನ್ನು ಕೊಡಬೇಕಾದಾಗ, ಸಂಪೂರ್ಣವಾಗಿ ಅವರಿಗೆ ಕೊಡದಿದ್ದರೆ, ಸಂಪೂರ್ಣವಾಗಿ ಕಾರ್ಖಾನೆಗಳನ್ನು ಮುಚ್ಚಿ ಹೋಗಿರುವಾಗ, ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛೆಪಡುತ್ತೇನೆ, ಏನೆಂದರೆ, 99ನೇ ಇಸವಿಯಲ್ಲಿ ನನಗೆ ಗೊತ್ತಿರುವ ಹಾಗೆ, 30 ಲಕ್ಷಕ್ಕಿಂತ ಹೆಚ್ಚು ಸಬ್ಸಿಡಿ ಕೊಡುವ ಅವಕಾಶವಿಲ್ಲ. 1999ರಲ್ಲಿ 30 ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡಬೇಕಾಗಿದ್ದರೆ, 5 ವರ್ಷಗಳಿಗೆ ಅವರಿಗೆ ಬಡ್ಡಿಯೇ 22 ಲಕ್ಷ ರೂಪಾಯಿಗಳಾಗುತ್ತದೆ. 30 ಲಕ್ಷ ರೂಪಾಯಿಗಳೀಗೆ 15 ಪರ್ಸೆಂಟ್‌ನಂತೆ ಬಡ್ಡಿ ಲೆಕ್ಕ ಹಾಕಿದರೆ, ವರ್ಷಕ್ಕೆ ನಾಲ್ಕೂವರೆ ಲಕ್ಷ ರೂಪಾಯಿ ಬಡ್ಡಿಯಾದರೆ, 5 ವರ್ಷಗಳಿಗೆ 22 ಲಕ್ಷ ರೂಪಾಯಿ ಬಡ್ಡಿ ಆಗುತ್ತಿರಬೇಕಾದರೆ, ಅವನ ಗತಿ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನೀವು ಪ್ರಾಜೆಕ್ಟ್ ಮಾಡಬೇಕಾದಾಗ, ಸಬ್ಸಿಡಿ ಲೆಕ್ಕದಲ್ಲಿ ಹಿಡಿದುಕೊಂಡು ವಯೇಬಲ್ ಎಂದು ಪ್ರಾಜೆಕ್ಟ್ ಮಾಡಿರುತ್ತೀರಿ. 5 ವರ್ಷ ವಿಳಂಬವಾದರೆ ಮುಂದೊಂದು ದಿನ ಪ್ರಾಜೆಕ್ಟ್ ಬಂದ್ ಆಗುತ್ತದೆಂಬುದನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂಬ ಪರಿಸ್ಥಿತಿ ಇರಬೇಕಾದಾಗ, ಇವತ್ತು ಯಾವಾಗ ಸಾಲ ಮಾಡಿ ಇದನ್ನು ಮಾಡಬೇಕೆಂದು ಹೊರಟಾಗ, 81$^{1}/_{2}$ ಕೋಟಿ ಮತ್ತು 60 ಕೋಟಿ ರೂಪಾಯಿಗಳಿಗೆ ಏಕೆ ಸೀಮಿತಗೊಳಿಸುತ್ತೀರಿ ? ಪೂರ್ಣವಾಗಿ ಸಾಲ ತೆಗೆದುಕೊಂಡು ಒಂದೇ ಸಲ ಮಾಡಲಿಕ್ಕೇನು ತೊಂದರೆ ಎಂಬುದನ್ನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಉದಾಸಿಯವರು ಬಹಳ ಅನುಭವಸ್ಥರು. ಲೋಕೋಪಯೋಗಿ ಸಚಿವರಾಗಿದ್ದರು, ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿದ್ದರು. ಅಕ್ಕಿ ವ್ಯಾಪಾರ

ಮಾಡಿದವರು. ಅವರಿಗೆ ಎಲ್ಲಾ ಅನುಭವವಿದೆ. ಅಕೌಂಟ್ಸ್ ಬಗ್ಗೆ ಅವರಿಗಿರುವ ನಾಲೆಡ್ಜ್ ನಮಗ್ಯಾರಿಗೂ ಸಹ ಇಲ್ಲ. I bow my head. ನಾನು ಮಾನ್ಯ ಉದಾಸಿಯವರಿಗೆ ಮಾತನಾಡಲು ಅವಕಾಶ ಕೊಡಿ ಎಂದು ಏಕೆ ಧನಿಗೂಡಿಸಿದೆ ಎಂದರೆ, ಹಿ ವಿಲ್ ಅಪ್ರೀಷಿಯೇಟ್ ದಿಸ್ ಎಂದು ಕೊಂಡೆ. ಎನಿ ಗೌರ್ನಮೆಂಟ್ ಫಾರ್ ದಟ್ ಮ್ಯಾಟರ್, 5–6 ವರ್ಷಗಳಿಂದ ಇರುವ ಇದಕ್ಕೆ ಕೃಷ್ಣರವರು, ಧರ್ಮಸಿಂಗ್‌ರವರು ಸಿದ್ಧರಾಮಯ್ಯನವರು ಸೇರಿ 140 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡುತ್ತಿದ್ದಾರೆ. This is an oxygen to the small scale industries ಎನ್ನುವ ಅಪ್ರೀಷಿಯೇಷನ್ ಇಲ್ಲದೇ ಹೋದರೆ ಹೇಗೆ ? ನಾವು ಮಾರ್ಕೆಟ್ ಬಾರೋಯಿಂಗ್ಸ್ ರೈಜ್ ಮಾಡಬೇಕಾದರೆ, ದೇರ್ ವಿಲ್ ಬಿ ಎಲಿಮಿಟ್. ಕೇವಲ ನನ್ನ ಇಲಾಖೆಯಷ್ಟೇ ಅಲ್ಲ, ಇಲ್ಲಿ ಸಕ್ಕರೆ ಪ್ರಶ್ನೆಗೆ ಬರುತ್ತೇನೆ, ಕಬ್ಬು ಬೆಳೆಗಾರರ ಪ್ರಶ್ನೆಗೆ ಬರುತ್ತೇನೆ. ಅದಕ್ಕೂ ನಾವು ಕೊಡಬೇಕಾಗುತ್ತದೆ. 309 ಕೋಟಿ ರೂಪಾಯಿ ಬಾಕಿ ಇತ್ತು. ಈಗ 100 ಕೋಟಿ ರೂಪಾಯಿ ಬಾಕಿ ಇದೆ. ಸಕ್ಕರೆ ಇಂಡಸ್ಟ್ರಿಗಳು ಕ್ಲೋಸ್ ಆಗುತ್ತಿವೆ. ಅವರಿಗೂ ಸಹಾಯ ಮಾಡಬೇಕು. ಒಂದೇ ಒಂದು ಸೆಕ್ಟಾರ್‌ಗೆ ನಾವು ಎಲ್ಲಾ 400 ಕೋಟಿ ರೂಪಾಯಿಗಳನ್ನೋ, ಅಲ್ಲೊಂದು 500 ಕೋಟಿ ರೂಪಾಯಿಗಳನ್ನೋ ಕೊಟ್ಟರೆ, how the budget will sustain, Therefore, kindly bear with us. I am honestly promising you that we will do everything possible to revive the small scale industries. But I want cooperation from this side and also that side.

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಸಿಂಧ್ಯರವರು ಈ ಕಡೆ ಕುಳಿತಾಗಲೂ ನಾವು ಒತ್ತಾಯ ಮಾಡಿದಾಗ ತಾವೂ ಒತ್ತಾಯ ಮಾಡಿದ್ದೀರಿ. ಕೃಷ್ಣರವರ ಸರ್ಕಾರವಿದ್ದಾಗ 400 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳ ಬಗ್ಗೆ ತಾವೂ ಸಾಕಷ್ಟು ಒತ್ತಡ ತಂದಿದ್ದೀರಿ. ಆದರೆ. 4 ವರ್ಷಗಳಲ್ಲಿ 80 ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದೀರಿ. 4 ವರ್ಷಗಳಲ್ಲಿ ಅದು ಬಹಳವಲ್ಲ. ನೀವೇನು ಮೊದಲ ವರ್ಷಗಳಲ್ಲಿ ಇನಿಷಿಯೇಷನ್ ಮಾಡಿದ್ದೀರಿ, ಅದನ್ನು ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಆದರೆ, ಇದರ ಜೊತೆಗೆ, ತಾವು ಮತ್ತೊಂದು ವಿಚಾರ ಮಾಡಬಹುದು ಏನೆಂದರೆ, 7–8 ವರ್ಷಗಳಿಂದ ಸಬ್ಸಿಡಿ ಇಲ್ಲದ್ದಕ್ಕೆ ಮೋರ್‌ದ್ಯಾನ್ 50 ಪರ್ಸೆಂಟ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಸಿಕ್ ಆಗಿ, ಆಲ್‌ಮೋಸ್ಟ್ ಕ್ಲೋಷರ್‌ಗೆ ಬಂದಿವೆ. ಲಕ್ಷಾಂತರ ಜನ ಅದರ ಮೇಲೆ ಡಿಪೆಂಡ್ ಆಗಿದ್ದಾರೆ, ಹೀಗಾಗಿ, ನಾನೊಂದು ಸಜೆಷನ್ ಮಾಡುತ್ತಿದ್ದೇನೆ, ಕೆಲವು ಇಂಡಸ್ಟ್ರಿಗಳಿಗೆ ಟ್ಯಾಕ್ಸ್ ಎಗ್ಜೆಂಪ್ಷನ್ ಕೊಟ್ಟಿದ್ದೀರಿ. ಕೋಕೋ ಕೋಲಾ ಇಂಡಸ್ಟ್ರಿಗೆ ಕೊಟ್ಟಿದ್ದೀರಿ. ಅದೇ ರೀತಿ, ಅಲ್ಟರ್‌ನೇಟೀವ್ ಸಬ್ಸಿಡಿ ಬರಲಿ. ಈಗಾಗಲೇ ಅಲ್ಲಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳಿವೆ. ಅವರಿಗೆ ಟ್ಯಾಕ್ಸ್ ಎಗ್ಜೆಂಪ್ಷನ್ ಕೊಡಿ. 2,3,4 ವರ್ಷ ಅವರಿಗೇನು ಸಬ್ಸಿಡಿ ಕೊಡಬೇಕಾಗಿದೆ. ಅದಕ್ಕೆ ಪೂರಕವಾಗಿ ತಾವು ಕೊಟ್ಟರೆ, ಒಳ್ಳೆಯದು. ಈ ಹಿಂದೆ ಅವರೂ ಸಜೆಷನ್ ಮಾಡಿದ್ದರು. ಇದನ್ನು ಕನ್‌ಸಿಡರೇಷನ್ ಮಾಡಿದರೆ, ನೀವು ಇದಕ್ಕೆ ಎಕ್ಸ್‌ಟ್ರಾ ಬರ್ಡನ್ ತೆಗೆದುಕೊಳ್ಳಲಿಕ್ಕಾಗುವುದಿಲ್ಲ.

**ಶ್ರೀ ಪಿ.ಜಿ.ಆರ್. ಸಿಂಧ್ಯ** : ರಾಜ್ಯದಲ್ಲಿ ಮೊದಲನೇ ಬಾರಿಗೆ ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳೇನಿವೆ. ಇವುಗಳು ನಿಜವಾಗಿಯೂ ಸಾವಿನ ಅಂಚಿನ ಹತ್ತಿರ ಹೋಗಿವೆ. ಇವುಗಳನ್ನು ಬದುಕಿಸಬೇಕು. ಅದಕ್ಕೋಸ್ಕರ, ನಾವು ಸರ್ಕಾರದಿಂದ ಒಂದು ಡಿಷಿಷನ್ ತೆಗೆದುಕೊಂಡಿದ್ದೇನೆ. We are going to constiture an Adivisory Board for

small Scale Industries' revival in Karnataka for which the Chairman will be the Minister himself, There will be representatives of KASSIA, and other organisations. ಕಾಸಿಯಾ, ಛೇಂಬರ್ ಆಫ್ ಕಾಮರ್ಸ್, ಜಿಎಂಸಿಐ ಇದರ ಎಲ್ಲಾ ರೆಪ್ರೆಸೆಂಟೆಟೀವ್ಸ್ ಇದರಲ್ಲಿರುತ್ತಾರೆ. ಇದಕ್ಕೆ ನಾವು ಎಕ್ಸ್‌ಪರ್ಟ್ಸ್ ಹಾಕುತ್ತಿದ್ದೇವೆ. ಎಕ್ಸ್‌ಪರ್ಟ್ ಕಮಿಟಿ ಏಕೆ ನಾನು ಮಾಡುತ್ತಿದ್ದೇವೆಂದರೆ, ತಾವು ಹೇಳಿದ ಹಾಗೆ. ಟ್ಯಾಕ್ಸ್ ಎಗ್ಜೆಂಪ್‌ಷನ್ ಕೊಡುವುದು. ಎಲ್ಲಿ ರಿವೈವ್ ಮಾಡಲಿಕ್ಕೆ ನಾವು ಮೆಷಿನರಿ ಮಾಡರ್ನೈಜ್ ಮಾಡಬೇಕಾಗಿದೆ, ಎಲ್ಲಿ ಅಪ್‌ಗ್ರೇಡ್ ಮಾಡಬೇಕಾಗಿದೆ, ಹ್ಯೂಮನ್ ರಿಸೋರ್ಸ್ ಸ್ಕಿಲ್ ಅನ್ನು ಎಲ್ಲಿ ಅಪ್‌ಗ್ರೇಡ್ ಮಾಡಬೇಕಾಗಿದೆ. ಯಾವ ರೀತಿಯಾಗಿ ಮಾರ್ಕೆಟಿಂಗ್ ಮಾಡಬೇಕಾಗಿದೆ ಎಂಬ ಬಗ್ಗೆ ಕಮಿಟಿ ಮಾಡುತ್ತಿದ್ದೇವೆ. ಮಾನ್ಯ ಪ್ರಹ್ಲಾದ್ ಜೋಷಿಯವರು, ಗೌರವಾನ್ವಿತ ಲೋಕಸಭಾ ಸದಸ್ಯರು ಬಹಳ ಪ್ರಮುಖವಾದ ಅಂಶವನ್ನು ನಮ್ಮ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದರು. ಬ್ರಾಂಡೆಡ್ ಮತ್ತು ಅನ್-ಬ್ರಾಂಡೆಡ್ ಪೂರಕಗಳ ವಿಚಾರದಲ್ಲಿ, ಪೂರಕಗಳ ಲಕ್ಷಾಂತರ ಕೋಟ್ಯಾಂತರ ವ್ಯವಹಾರದ್ದಾಗಿದೆ. ಅದು ತಮಿಳುನಾಡಿಗೆ ಹೋಗುತ್ತಿತ್ತು. ನಮ್ಮ ರಾಜ್ಯದಲ್ಲಿ ಆಗುತ್ತಿರಲಿಲ್ಲ. ಆದುದರಿಂದ, ಉಪ ಮುಖ್ಯಮಂತ್ರಿಗಳು ಆ ಟ್ಯಾಕ್ಸ್ ಅನ್ನು ಕಡಿಮೆ ಮಾಡಿದ್ದರಿಂದ, ನಾ ಇನ್ ಪಾರ್ ವಿಥ್ ತಮಿಳುನಾಡು ಆಯಿತು. ನಮ್ಮಲ್ಲೂ ಸಹ ಸಾಕಷ್ಟು ಖರ್ಚಾಗುವ ಅವಕಾಶವಿದೆ. It is also one of the tiny industries we have. Like that I am doing my best with the assistance of the hon'ble Deputy Chief minister to give such incentives. we will definitely have an open on this issue

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಸಿಂಧ್ಯರವರು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಬೇಕು.

**ಶ್ರೀ ಪಿ.ಜಿ.ಆರ್. ಸಿಂಧ್ಯ** : ಅದರ ಬಗ್ಗೆ ನಂತರ ಬರುತ್ತೇನೆ. ಸಕ್ಕರೆ ಬಗ್ಗೆ ಪ್ರಶ್ನೆ ಇದೆ.

**ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯನ್ನು ಮೆಗಾ ಸಿಟಿಯೋಜನೆಯಲ್ಲಿ ಸೇರ್ಪಡಿಸುವ ಬಗ್ಗೆ**

48(367) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್(ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಮೆಗಾಸಿಟಿ ಯೋಜನೆಯು ಯಾವ ಯಾವ ನಗರಗಳಲ್ಲಿ ಅಸ್ತಿತ್ವದಲ್ಲಿದೆ;

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಮೆಗಾಸಿಟಿ ಯೋಜನೆಯಡಿಯಲ್ಲಿದೆಯೇ;

ಇ) ಇದ್ದಲ್ಲಿ, ಸದರಿ ಯೋಜನೆಯಿಂದ ಸಿಗುವ ಸೌಲಭ್ಯಗಳಾವುವು ;

ಈ) ಮೆಗಾಸಿಟಿ ಯೋಜನೆಯಲ್ಲಿ ಸೇರ್ಪಡಿಸುವ ನಗರಗಳಿಗೆ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ ; (ವಿವರ ನೀಡುವುದು) ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) ಮೆಗಾಸಿಟಿ ಯೋಜನೆಯು ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಮಾತ್ರ ಅಸ್ತಿತ್ವದಲ್ಲಿದೆ.

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಮೆಗಾಸಿಟಿ ಯೋಜನೆಯಡಿ ಭಾರತ ಸರ್ಕಾರವು ಫೆಬ್ರವರಿ 1995ರಲ್ಲಿ ನಿಗದಿಪಡಿಸಿದ ಈ ಕೆಳಕಂಡ ಮಾನದಂಡದ ಆಧಾರದ ಮೇಲೆ ನಗರಗಳನ್ನು ಆಯ್ಕೆ ಮಾಡಿದೆ.